ಸಿ.ಸಿ. ನಂ.250/2023

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ
ನ್ಯಾಯಾಲಯ, ಹೊಸನಗರ .

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕಾಮೋದ್ ಕುಮಾರ್ ಜಾ | ಪಿ.ಡಬ್ಲ್ಯೂ- 1 |
| ತಂದೆ ಹೆಸರು | : | ದಾಮೋದರ್ ಜಾ | ಸಿ.ಡಬ್ಲ್ಯೂ- 1 |
| ವಯಸ್ಸು | : | 40 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | : | ಸೀನಿಯರ್ ಮ್ಯಾನೇಜರ್, ಕೆನರಾ ಬ್ಯಾಂಕ್, ಚಪ್ರತೇಲಪ | ದಿಃ 17/02/2026 |
| ವಾಸ | : | ಚಪ್ರತೇಲಪ, ಬಿಹಾರ್ ರಾಜ್ಯ. | |

ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-

ನಾನು ಸೆಪ್ಟೆಂಬರ್-2017 ರಿಂದ ಸೆಪ್ಟೆಂಬರ್ -2020 ರವರೆಗೆ ರಿಪ್ಪನ್ ಪೇಟೆ ಶಾಖೆಯ ಕೆನರಾ ಬ್ಯಾಂಕ್ ನಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-2 ರಿಂದ 6 ರವರು ಪರಿಚಯಸ್ಥರು. ದಿಃ18.12.2017 ರಂದು ರಾತ್ರಿ ವೇಳೆಯಲ್ಲಿ ನಮ್ಮ ಬ್ಯಾಂಕ್ ನಲ್ಲಿ ಕಳ್ಳತನದ ಪ್ರಯತ್ನವಾಗಿದ್ದು, ಮಾರನೇ ದಿನ ದಿಃ19.12.2017 ರಂದು ಬೆಳ್ಳಗೆ 9.30 ರ ಸಮಯದಲ್ಲಿ ನಾನು ಕರ್ತವ್ಯ ಕ್ಕೆ ಬಂದಾಗ ಬ್ಯಾಂಕ್ ನ ಮುಂಭಾಗದ ಶೆಟ್ಟರ್ ನ ಬೀಗ ಒಡೆದಿದ್ದರು ಮತ್ತು ಸೆಂಟ್ರಲ್ ಲಾಕ್ ನ್ನು ಮುರಿದಿದ್ದರು. ಅದರೆ ಸೆಂಟ್ರಲ್ ಲಾಕ್ ಒಪನ್ ಆಗಿರಲಿಲ್ಲ. ನಂತರ ಈ ಬಗ್ಗೆ ನಾನು ಅದೇ ದಿನ ರಿಪ್ಪನ್ ಪೇಟೆ ಪೋಲಿಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ಸದರಿ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಪೋಲಿಸರು ಸಂಜೆ ಬ್ಯಾಂಕ್ ಹತ್ತಿರ ಬಂದಿದ್ದು, ನಾನು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 6.00 - 6.45 ರವರೆಗೆ ಮಹಜರ್ ಕ್ರಮ ಜರುಗಿಸಿ ಒಂದು ಭಾವಚಿತ್ರವನ್ನು ತೆಗೆಸಿರುತ್ತಾರೆ. ಸಾಕ್ಷಿಯು ಮಹಜರ್ ನ ಪ್ರತಿ ಮತ್ತು ಭಾವಚಿತ್ರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ನಂತರ ದಿಃ23.03.2018 ರಂದು ಪೋಲಿಸರು ರಶೀದ್ ಮೊಹಿದ್ದೀನ್ ಅಜರ್, ಮೆಹರೂಪ್ ಮತ್ತು ನಟರಾಜ್ ಎಂಬ 4 ಜನ ಆರೋಪಿತರನ್ನು ಕರೆದುಕೊಂಡು ನಮ್ಮ ಬ್ಯಾಂಕ್ ಗೆ ಬಂದು ಸದರಿ 4 ಜನ ಆರೋಪಿತರು ತಾವು ಇದೇ ಜಾಗದಲ್ಲಿ ಕೃತ್ಯ ಎಸಗಿರುವುದಾಗಿ ಸ್ಥಳವನ್ನು ತೋರಿಸಿದ್ದು, ನನ್ನ ಮತ್ತು ಪಂಚರಾದ ಚಾಸಾ-4 ಮತ್ತು 5 ರವರ ಮಧ್ಯಾಹ್ನ 2.30 ರಿಂದ 3.15 ರವರೆಗೆ ಮಹಜರ್ ಕ್ರಮ ಜರುಗಿಸಿ ಭಾವಚಿತ್ರ ತೆಗೆಸಿರುತ್ತಾರೆ. ಸಾಕ್ಷಿಯು ಮಹಜರ್ ನ ಪ್ರತಿ ಮತ್ತು ಭಾವಚಿತ್ರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಸದರಿ ರಶೀದ್ ಮೊಹಿದ್ದೀನ್ ಹೆಸರಿನ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು, ವಿನಾಯತಿ ಅರ್ಜಿ ಸಲ್ಲಿಸಿದ್ದು, ಸದರಿ ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವೈ.ಪಿ.ಎಂ ವಕೀಲರ ಪರವಾಗಿ ಎ.ಎಂ.ಎಲ್ ವಕೀಲರು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ವೈ.ಪಿ.ಎಂ. ವಕೀಲರ ಪರವಾಗಿ ಎ.ಎಂ.ಎಲ್ ವಕೀಲರಿಂದ.</u>

ಚಾಸಾ2 ಮತ್ತು 3 ನಮ್ಮ ಬ್ಯಾಂಕ್ ನ ಗ್ರಾಹಕರು, ಚಾಸಾ-4 ಮತ್ತು 5 ರವರು ನಮ್ಮ ಬ್ಯಾಂಕ್ ನ ಸಿಬ್ಬಂದಿಗಳು. ನಿಪಿ-1 ದೂರಿನಲ್ಲಿರುವ ಬರವಣಿಗೆಯನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಬ್ಯಾಂಕ್ ನ ಸಿಬ್ಬಂದಿ ರಾಧಿಕ ಬರೆದಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಬರವಣಿಗೆ ರಾಧಿಕ ರವರಾದಾಗಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕ್ ನ ಮೂರು ಕಡೆ ಮನೆಗಳು ಇವೆ ಎಂದರೆ ಸರಿ. ನಮ್ಮ ಬ್ಯಾಂಕ್ ಗೆ ರಾತ್ರಿ ವೇಳೆಯಲ್ಲಿ ಸೆಕ್ಯೂರಿಟಿ ಗಾರ್ಡ ಅಥವಾ ರಾತ್ರಿ ಕಾವಲುಗಾರ ಇರುತ್ತಾರ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನಮ್ಮ ಬ್ಯಾಂಕ್ ನ ಯಾವ ಕಂಪನಿಯ ಬೀಗವನ್ನು ಒಡೆದಿದ್ದರು ಎಂದರೆ ಸಾಕ್ಷಿಯು ಗೊಡ್ರೇಜ್ ಕಂಪನಿಯ ಬೀಗ ಒಡೆದಿದ್ದರು ಎಂದು ಹೇಳುತ್ತಾರೆ. ಒಡೆದಿರುವ ಬೀಗವನ್ನು ತೆಗೆದುಕೊಂಡು ಹೋಗಿದ್ದರಾ ಅಥವಾ ಅಲ್ಲೆ ಇತ್ತಾ ಎಂದರೆ ಸಾಕ್ಷಿಯು ಅಲ್ಲೆ ಇತ್ತು ಎಂದು ಹೇಳುತ್ತಾರೆ. ನಮ್ಮ ಬ್ಯಾಂಕ್ ನ ಡೋರ್ ನ ಕೀ ಯಾರ ಹತ್ತಿರ ಇರುತ್ತದೆ ಎಂದರೆ ಸಾಕ್ಷಿಯು ಒಂದು ಕೀ ನನ್ನ ಹತ್ತಿರ ಇರುತ್ತದೆ, ಇನ್ನೊಂದ ಕೀ ಫಸ್ಟ ಆಫೀಸರ್ ರವರ ಬಳಿ ಮತ್ತು ಇನ್ನೊಂದು ಕೀ ಸರ್ವಿಸ್ ಸ್ಟಾಪ್ ಜ್ಯೋತಿ ಹತ್ತಿರ ಇರುತ್ತದೆ ಎಂದು ಹೇಳುತ್ತಾರೆ. ನಾನು ಅ ದಿನ ಬ್ಯಾಂಕ್ ಗೆ ಬಂದಾಗ ಅಕ್ಕಪಕ್ಕದವರು ಯಾರು ಬಂದಿರಲಿಲ್ಲ. ನಾನು ಬ್ಯಾಂಕ್ ಗೆ ಬಂದು ಬೀಗ ಒಡೆದು ಹೋಗಿರುವ ಬಗ್ಗೆ ಗಮನಿಸಿದಾಗ ಫಸ್ಟ ಅಫೀಸರ್ ಮತ್ತು ಸರ್ವಿಸ್ ಸ್ಟಾಪ್ ಬಳಿ ಕೀ ಇರುವುದನ್ನು ಗಮನಿಸಿದ್ದೆನು. ನಾನು ಅ ರೀತಿ ಯಾವುದೇ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸರು ನಿಪಿ-2 ರಂತೆ ನನ್ನ ಮತ್ತು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ನಿಪಿ-3 ರಂತೆ ಭಾವಚಿತ್ರ ತೆಗೆಸಿರುವುದು ಸುಳ್ಳು ಎಂದರೆ ಸರಿಯಲ್ಲ.

ಅದೇ ರೀತಿ ದಿಃ23.03.2018 ರಂದು ಪೋಲಿಸರು ಆರೋಪಿತರನ್ನು ಸ್ಥಳಕ್ಕೆ ಕರೆದುಕೊಂಡು ಬಂದು ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-4 ರಂತೆ ಮಹಜರ್ ಕ್ರಮ ಜರುಗಿಸಿ ನಿಪಿ-5 ರಂತೆ ಭಾವಚಿತ್ರ ತೆಗೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬರುವುದಕ್ಕಿಂತ ಮುಂಚೆ ನನಾಗಗಲೀ ಅಥವಾ ಚಾಸಾ-4 ಮತ್ತು 5 ರವರಿಗಾಗಲೀ ನೋಟಿಸು ಕೊಟ್ಟಿರುವುದಿಲ್ಲ. ನನಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ನಮ್ಮ ಹಿರಿಯ ಅಧಿಕಾರಿಗಳ ಮಾತು ಕೇಳಿ ನಾನು ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)**

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸನಗರ.**